**ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ,**
**ಸಕಲೇಶಪುರ**
**C.C.No.677/2018**

| | | |
|---|---|---|
| **ಹೆಸರುಃ** | **ರಮೇಶ್** | **CW-10** |
| **ತಂದೆ/ಗಂಡ ಹೆಸರುಃ** | **ರಾಮೇಗೌಡ** | **PW-8** |
| **ವಯಸ್ಸುಃ** | **53 ವರ್ಷ** | |
| **ವೃತ್ತಿಃ** | **ಮಿಲ್ ನಲ್ಲಿ ಕೆಲಸ** | |
| **ವಿಳಾಸಃ** | **ಬಾಳ್ಳುಪೇಟೆ** | **ದಿನಾಂಕಃ 13-05-2025** |

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ಯವರಿಂದ.**

ನಾನು ಆರೋಪಿಯ ಫೈನಾನ್ಸ್ ನಲ್ಲಿ ವಡವೆಗಳನ್ನು ಅಡ ಇಟ್ಟಿದ್ದೆ. ಆನಂತರ ಆರೋಪಿ ಮೋಸ ಮಾಡಿರುವ ಬಗ್ಗೆ ನನಗೆ ತಿಳಿದಿರುತ್ತದೆ. ನಮ್ಮ ಬಳಿ ವಡವೆಗಳನ್ನು ಗಿರವಿ ಮಾಡಿಕೊಂಡು ಎಲ್ಲ ವಡವೆಗಳನ್ನು ಮುತ್ತೂಟ್ ಫೈನಾನ್ಸ್ ನಲ್ಲಿ ಗಿರವಿ ಇಟ್ಟಿರುತ್ತಾರೆ. ನಾನು ಮನೆ ಕಟ್ಟುವ ಸಲುವಾಗಿ ಹಣ ಬೇಕಾಗಿದ್ದರಿಂದ 19.300 ಗ್ರಾಂ ನ ಚೈನು ಮತ್ತು 19.600 ಗ್ರಾಂ ನ ಮತ್ತೊಂದು ಚೈನನ್ನು 2017 ಮತ್ತು 18 ರಲ್ಲಿ ರೂ. 25,400 ಮತ್ತು 28,000/- ರೂ ಗಳಿಗೆ ಅಡ ಇಟ್ಟಿರುತ್ತೇನೆ. ಆರೋಪಿ ರಸೀದಿ ನಂಃ 134 ಮತ್ತು 135 ಎಂಬ ರಸೀದಿಗಳನ್ನು ನೀಡಿರುತ್ತಾರೆ. ಅಂಗಡಿ ಮುಚ್ಚಿದ ನಂತರ ಆರೋಪಿ ಮೋಸ ಮಾಡಿದ ಬಗ್ಗೆ ತಿಳಿದುಬಂದಿರುತ್ತದೆ. ಆರೋಪಿ ಮುತ್ತೂಟ್ ಫೈನಾನ್ಸ್ ನಲ್ಲಿ ಎಷ್ಟು ಹಣಕ್ಕೆ ಗಿರವಿ ಇಟ್ಟಿದ್ದರು ಎಂದು ಗೊತ್ತಿಲ್ಲ. ಠಾಣೆಯಲ್ಲಿ ದೂರು ದಾಖಲಾದ ನಂತರ ನ್ಯಾಯಾಲಯದ ಮುಖಾಂತರ ನಾನು ಚಿನ್ನವನ್ನು ಬಿಡಿಸಿಕೊಂಡಿರುತ್ತೇನೆ. ನಾನು ಪೋಲೀಸರಿಗೆ ಹೇಳಿಕೆ ನೀಡಿರುತ್ತೇನೆ. ಆರೋಪಿ ಹೆಸರು ಕೆ ಎನ್ ರಾಜು ಎಂದು ಇರುತ್ತದೆ. ಅವರನ್ನು ನೋಡಿದರೆ ನಾನು ಗುರುತಿಸಬಲ್ಲೆ. ಸಾಕ್ಷಿಯು ಪೋಟೋವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-24 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಕೆ ಕೆ ಎಂ ವಕೀಲರಿಂದ**

ಸಿ ಆರ್ ಎಸ್ ಫೈನಾನ್ಸ್ ಸುಮಾರು ಒಂದೂವರೆ ವರ್ಷ ನಡೆದಿರುತ್ತದೆ. ಆರೋಪಿ ಸುಮಾರು ಆರು ತಿಂಗಳು ತಲೆ ಮರೆಸಿಕೊಂಡಿರುತ್ತಾರೆ. ಸಿ ಆರ್ ಎಸ್ ಫೈನಾನ್ಸ್ ನಲ್ಲಿ ಇಬ್ಬರು ಕೆಲಸ ಮಾಡುತ್ತಿದ್ದರು. ಆರೋಪಿ ಹೋಗುವುದು ಬರುವುದು ಮಾಡುತ್ತಿದ್ದರು, ಒಬ್ಬ ಮಹಿಳೆ ಅಲ್ಲೇ ಕೆಲಸ ಮಾಡುತ್ತಿದ್ದರು. ಬಿಲ್ ಕೊಡುವುದು, ಮಿಕ್ಕ ಕೆಲಸಗಳನ್ನು ಸದರಿ ಮಹಿಳೆ ಮಾಡುತ್ತಿದ್ದರು. ನಮ್ಮ ಮಿಲ್ ಪಕ್ಕದಲ್ಲೇ ಕಾಂಪ್ಲೆಕ್ಸ್ ನಲ್ಲಿ ಸಿ ಆರ್ ಎಸ್ ಫೈನಾನ್ಸ್ ಇದ್ದು ಅದು ಬಂದ ನಂತರ ನಮಗೆ ಗೊತ್ತಾಗಿರುತ್ತದೆ. ಸಿ ಆರ್ ಎಸ್ ಫೈನಾನ್ಸ್ ಪ್ರಾರಂಭವಾದ ಆರು ತಿಂಗಳ ನಂತರ ನಾನು ಒಡವೆಗಳನ್ನು ಗಿರವಿ ಇಟ್ಟಿರುತ್ತೇನೆ. ಸಿ ಆರ್ ಎಸ್ ಫೈನಾನ್ಸ್ ಅಧಿಕೃತವೋ ಅನಧಿಕೃತವೋ ನನಗೆ ಗೊತ್ತಿಲ್ಲ. ಅದು ಪರವಾನಿಗೆ ಪಡೆದಿತ್ತೋ ಇಲ್ಲವೋ ನನಗೆ ಗೊತ್ತಿಲ್ಲ.

ಫೈನಾನ್ಸ್ ಕಛೇರಿ ಇರುವಾಗ ಗ್ರಾಹಕರಿಂದ ಯಾವುದೇ ಗಲಾಟೆ ಆಗಿರುವುದಿಲ್ಲ. ಆರೋಪಿ ಪರಾರಿಯಾದ ನಂತರವೇ ಮೋಸ ಮಾಡಿದ ಬಗ್ಗೆ ತಿಳಿದು ಬಂದಿರುತ್ತದೆ. ಆರೋಪಿ ಮಾಡುತ್ತಿದ್ದ ವ್ಯವಹಾರಗಳ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಆರೋಪಿ ಪರಾರಿಯಾಗಿರುವ ಬಗ್ಗೆ ದೂರು ದಾಖಲಾದ ಎರಡು ತಿಂಗಳ ನಂತರ ಗೊತ್ತಾಗಿರುತ್ತದೆ. ಗಿರವಿ ಇಟ್ಟ ಬಗ್ಗೆ ನಾನು ಒಂದು ತಿಂಗಳು ಬಡ್ಡಿ ಪಾವತಿ ಮಾಡಿರುತ್ತೇನೆ. ಬಡ್ಡಿ ಕಟ್ಟಿರುವ ಬಗ್ಗೆ ರಸೀದಿ ನೀಡಿರುವುದಿಲ್ಲ. ರಸೀದಿ ನಂಃ 134 ರಲ್ಲಿ 28,000 ಮತ್ತು 135 ರಲ್ಲಿ 25,400 ರೂ ಗಳನ್ನು ನಮೂದು ಮಾಡಿರುತ್ತಾರೆ. ನಾನು 2017-18 ರಲ್ಲಿ ಗಿರವಿ ಇಟ್ಟಿರುತ್ತೇನೆ. ದಿನಾಂಕ ನೆನಪಿಲ್ಲ. ರಸೀದಿಗಳನ್ನು ಒಡವೆ ನೀಡುವ ಕಾಲಕ್ಕೆ ಪೋಲೀಸರು ತೆಗೆದುಕೊಂಡಿರುತ್ತಾರೆ. ರಸೀದಿಗಳು ಯಶೋಧರವರ ಹೆಸರಿನಲ್ಲಿ ಇರುತ್ತವೆ. ರಸೀದಿ ಪಡೆಯುವ ಕಾಲಕ್ಕೆ ಪಂಚನಾಮೆ ಮಾಡಿರುವುದಿಲ್ಲ ಮತ್ತು ಒಡವೆ ನನಗೆ ಹಿಂದಿರುಗಿಸುವ ಕಾಲಕ್ಕೆ ಪಂಚನಾಮೆ ಮಾಡಿರುವುದಿಲ್ಲ. ನನಗಾಗಲೀ ಅಥವಾ ನನ್ನ ಹೆಂಡತಿಗಾಗಲೀ ಪೋಲೀಸರು ನೋಟೀಸ್ ನೀಡಿರುವುದಿಲ್ಲ. ಪೋಲೀಸರು ಫೈನಾನ್ಸ್ ಕಛೇರಿ ಬಳಿ ಬಂದಾಗ ನಾನು ಇರಲಿಲ್ಲ. ಆದ್ದರಿಂದ ಆ ಬಗ್ಗೆ ನನಗೆ ಮಾಹಿತಿ ಇಲ್ಲ. ಪೋಲೀಸರು ನನ್ನನ್ನು ಮತ್ತು ನನ್ನ ಹೆಂಡತಿಯನ್ನು ಎರಡು ದಿನ

ಠಾಣೆಗೆ ಕರೆಸಿರುತ್ತಾರೆ. ಪೋಲೀಸರು ನನ್ನ ಹೆಂಡತಿಯಿಂದ ದಾಖಲಾತಿಗೆ ಸಹಿ ಪಡೆದಿರುತ್ತಾರೆ. ನನ್ನಿಂದ ಪಡೆದಿರುವುದಿಲ್ಲ. ಪೋಲೀಸರು ನನ್ನ ಹೆಂಡತಿಯ ಹೇಳಿಕೆ ಪಡೆದಿರುತ್ತಾರೆ.

ಸಿ ಆರ್ ಎಸ್ ಫೈನಾನ್ಸ್ ಗೆ ಗ್ರಾಹಕರು ಬಂದು ಹೋಗುವುದು ಮಾಡುತ್ತಿದ್ದರು. ಯಾವ ಯಾವ ಗ್ರಾಹಕರ ಯಾವಾಗ ಬಂದಿರುತ್ತಾರೆ ಎಂದು ಹೇಳಲು ಆಗುವುದಿಲ್ಲ. ನನ್ನ ಹೆಂಡತಿ ಹೆಸರಿನಲ್ಲಿ ಆರೋಪಿ ಕಛೇರಿಯಲ್ಲಿ ಚಿನ್ನ ಗಿರವಿ ಇಟ್ಟಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಯಾವುದೇ ರಸೀದಿ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯಿಂದ ರೂ.28,000/- ಮತ್ತು 25,400/- ರೂ ಗಳನ್ನು ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ ಹಣಕಾಸಿನ ವ್ಯವಹಾರ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಆರೋಪಿ ಆರು ತಿಂಗಳ ಕಾಲ ತಲೆಮರೆಸಿಕೊಂಡಿರುತ್ತಾರೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಒಂದು ವೇಳೆ ತಲೆಮರೆಸಿಕೊಂಡಿದ್ದರೆ ಆತನ ಕಛೇರಿ ಬಳಿ ಗಲಾಟೆ ಮಾಡುತ್ತಿದ್ದರು ಎಂದರೆ ಸರಿ. ಆರೋಪಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಆರೋಪಿಯ ವಿರುದ್ಧ ವಯಕ್ತಿಕ ದ್ವೇಷದಿಂದ ಅವರ ಬಳಿ ಯಾವುದೇ ವಡವೆ ಅಡ ಇಡದೇ ಇದ್ದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಹೆಸರಿನಲ್ಲಿ ಯಾವುದೇ ಫೈನಾನ್ಸ್ ಇರಲಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

**ಉಕ್ತ ಲೇಖನದಂತೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಓ ಹೆ ಕೇ ಸ ಇ**

**ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ ಸಕಲೇಶಪುರ**